# ಸಂಪನ್ಮೂಲ ವಿಮರ್ಶೆ

## ಚಟುವಟಿಕೆ ಹಾಳೆ I: ಗೋಡೆಯ ಮೇಲಿನ ಜೀವಜಗತ್ತಿನ ಅನ್ವೇಷಣೆ

### ಗುರಿ:

ಲಾವಣ್ಯ ಕಾರ್ತಿಕ್ ಅವರ 'ದ ಗರ್ಲ್ ಹು ವಾಸ್ ಎ ಫಾರೆಸ್ಟ್' ಪುಸ್ತಕವು ಜಾನಕಿ ಅಮ್ಮಾಳ್ ಅವರು ತಮ್ಮ ಮನೆಯ ಸುತ್ತಮುತ್ತಲಿನ ಜೀವಿಗಳನ್ನು ಗಮನಿಸುವುದರಲ್ಲಿ ಕಂಡುಕೊಂಡ ಸಂತೋಷದ ಬಗ್ಗೆ ಹೇಳುತ್ತದೆ. ನಿಮ್ಮ ನೆರೆಹೊರೆಯಲ್ಲಿ ನೀವು ಅನೇಕ ರೀತಿಯ ಗಿಡಗಳನ್ನು ಮತ್ತು ಪ್ರಾಣಿಗಳನ್ನು ನೋಡುತ್ತೀರಾ? ಅವುಗಳನ್ನು ನೀವು ಎಲ್ಲೆಲ್ಲಿ ಕಾಣಬಹುದು? ನಿಮ್ಮ ತರಗತಿಯ ಅಥವಾ ಮನೆಯ ಗೋಡೆಗಳ ಮೇಲೆ ಅಂತಹ ಜೀವಿಗಳನ್ನು ಎಂದಾದರೂ ನೋಡಿದ್ದೀರಾ?

### ನಿಮಗೆ ಬೇಕಾಗುವ ಸಾಮಗ್ರಿಗಳು:



ಕಾಗದ ಮತ್ತು ಪೆನ್ಸಿಲ್



ಒಂದು ಭೂತಗನ್ನಡಿ (ಇದ್ದರೆ ಮಾತ್ರ).

### ಏನು ಮಾಡಬೇಕು:

ಇದನ್ನು ನೀವು ಒಬ್ಬರೇ ಅಥವಾ ಸ್ನೇಹಿತರೊಂದಿಗೆ ಮಾಡಬಹುದು. ನಿಮ್ಮ ಶಾಲೆಯ ಅಥವಾ ಮನೆಯ ಸುತ್ತಲಿನ ಹೊರಗಿನ ಗೋಡೆಯ ಒಂದು ಭಾಗವನ್ನು ಆರಿಸಿಕೊಳ್ಳಿ. ಅದನ್ನು 15 ನಿಮಿಷಗಳ ಕಾಲ ಕೂಲಂಕಷವಾಗಿ ಗಮನಿಸಿ. ನೀವು ನೋಡಿದ್ದನ್ನು ಒಂದು ಕಾಗದದ ಮೇಲೆ ದಾಖಲಿಸಿ. ವೀಕ್ಷಣೆ ಮಾಡುತ್ತಿರುವ ಸಮಯವನ್ನು ಬರೆದುಕೊಳ್ಳಿ. ಆ ಗೋಡೆಯ ಮೇಲೆ ನೀವು ಕಾಣುವ ಪ್ರತಿಯೊಂದು ಜೀವಿಯನ್ನು (ಮತ್ತು ಅವು ನಿರ್ಮಿಸಿದ ಗೂಡುಗಳನ್ನು) ವಿವರಿಸಿ. ಅದು ಹೇಗೆ ಕಾಣುತ್ತದೆ? ಎಷ್ಟು ದೊಡ್ಡದಿದೆ? ಅಲ್ಲಿ ಯಾವ ಬಣ್ಣಗಳನ್ನು ನೋಡುತ್ತಿದ್ದೀರಿ? ಆ ಜೀವಿಗಳು ಆ ಗೋಡೆಯನ್ನು ಏಕೆ ಬಳಸುತ್ತಿರಬಹುದು ಎಂದು ನಿಮಗೆ ಅನಿಸುತ್ತದೆ?

### ದಾಖಲಿಸಿ:

ನಿಮ್ಮ ನೋಟ್‌ಬುಕ್‌ನಲ್ಲಿ ಒಂದು ಚೌಕವನ್ನು (ಈ ಪುಟದಲ್ಲಿರುವಂತೆ) ಬರೆಯಿರಿ. ಇದನ್ನು ನಿಮಗೆ ಬೇಕಾದಷ್ಟು ದೊಡ್ಡದಾಗಿ ಬರೆಯಬಹುದು. ನೀವು ಗಮನಿಸಿದ ಗೋಡೆಯ ಭಾಗವನ್ನು ಈ ಚೌಕದೊಳಗೆ ಚಿತ್ರಿಸಿ. ಆ ಗೋಡೆಯು ಹಳೆಯದೋ ಅಥವಾ ಹೊಸದೋ? ಅದರ ಬಣ್ಣ ಯಾವುದು? ಅದು ನುಣುಪಾಗಿದೆಯೇ ಅಥವಾ ಒರಟಾಗಿದೆಯೇ? ಅಲ್ಲಿ ಯಾವ ಆಕಾರಗಳು ಅಥವಾ ವಿನ್ಯಾಸಗಳು ಕಾಣಿಸುತ್ತಿವೆ? ಅಲ್ಲಿ ನೀವು ಕಂಡ ಜೀವಿಗಳು ಯಾವುವು?

**ಕೊಡುಗೆ:**

**ನೇಚರ್ ಕ್ಲಾಸ್‌ರೂಮ್ಸ್** ಸಂಸ್ಥೆಯು ಪೂರ್ವಸಿದ್ಧತಾ ಹಂತದ ಪರಿಸರ ಅಧ್ಯಯನದ ಬೋಧನೆ ಮತ್ತು ಕಲಿಕೆಗೆ ಪೂರಕವಾದ ಪ್ರಕೃತಿ ಶಿಕ್ಷಣದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುತ್ತದೆ. ಅಲ್ಲದೆ, ಇದು ಶಾಲಾ ಶಿಕ್ಷಕರು ಮತ್ತು ಶಿಕ್ಷಣ ತಜ್ಞರಿಗಾಗಿ ಪ್ರಕೃತಿ ಕಲಿಕೆಯ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರಗಳನ್ನು ನಡೆಸುತ್ತದೆ. ನೇಚರ್ ಕ್ಲಾಸ್‌ರೂಮ್ಸ್ ಈ ಸಂಪನ್ಮೂಲದ ಹಕ್ಕುಗಳನ್ನು ಹೊಂದಿದ್ದು, ಇದನ್ನು CC BY-SA 4.0 ಪರವಾಗಿಯ ಅಡಿಯಲ್ಲಿ ಹಂಚಿಕೊಳ್ಳಲಾಗಿದೆ. ಈ ಆವೃತ್ತಿಯನ್ನು ಐ ವಂಡರ್... ಪತ್ರಿಕೆಯ ಓದುಗರಿಗಾಗಿ ಮಾರ್ಪಡಿಸಲಾಗಿದೆ ಮತ್ತು ಹಕ್ಕುಸ್ವಾಮ್ಯ ಹೊಂದಿರುವವರ ಅನುಮತಿಯೊಂದಿಗೆ ಪ್ರಕಟಿಸಲಾಗಿದೆ. ನೇಚರ್ ಕ್ಲಾಸ್‌ರೂಮ್ಸ್‌ನ ಹೆಚ್ಚಿನ ಕಾರ್ಯಗಳನ್ನು ನೀವು ಅವರ ಜಾಲತಾಣದಲ್ಲಿ ನೋಡಬಹುದು.

ಐ ವಂಡರ್... ರೀಡಿಸ್ಕವರಿಂಗ್ ಸ್ಕೂಲ್ ಸೈನ್ಸ್

ಅನುವಾದ: **ವಿಶ್ವಾಸ್ ಸೊಲಗಿ** | ಪರಿಶೀಲನೆ: **ಬಿ. ಎಂ. ಚಂದ್ರಶೇಖರ್**